## ವಾರ್ತಾ ವಿಶ್ಲೇಷಣೆ

### ಅಮೆರಿಕದಲ್ಲಿ ಶಾಂತಿಮಂತ್ರ

ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಒಂದಾದ ನೆವಾಡ ಸಂಸ್ಥಾನದ ಶಾಸನಸಭೆಯು ತನ್ನ ಈ ವರ್ಷದ ಅಧಿವೇಶನವನ್ನು ಹಿಂದೂ ಧಾರ್ಮಿಕ ಪ್ರಾರ್ಥನೆಗಳೊಂದಿಗೆ ಪ್ರಾರಂಭಿಸಿರುವುದು ಒಂದು ವಿಶೇಷ ಸಂಗತಿ. ೧೮೬೪ರಲ್ಲೇ ಅಸ್ತಿತ್ವಕ್ಕೆ ಬಂದ ಈ ಸಂಸ್ಥಾನದಲ್ಲಿ ಮೊದಲ ಬಾರಿ ಇಂತಹ ಒಂದು ವಿನೂತನವಾದ ಬದಲಾವಣೆ ಕಂಡುಬಂದಿದೆ. 'ನಮ್ಮ ಧರ್ಮವೇ ಶ್ರೇಷ್ಠ', 'ಎಲ್ಲ ಸತ್ಯವೂ ನಮ್ಮ ಧರ್ಮದಲ್ಲಿ ಮಾತ್ರ ಇದೆ' ಎಂದು ಭಾವಿಸುತ್ತ ಇತರ ಧರ್ಮಗಳ ಬಗ್ಗೆ, ಸಂಸ್ಕೃತಿಗಳ ಬಗ್ಗೆ ಅಸಡ್ಡೆ ತೋರುವ ಮನೋಭಾವಕ್ಕೆ ಕಡೆಗೂ ಕೊಡಲಿಯೇಟು ಬಿದ್ದಿದೆ ಎಂದು ಆಶಿಸೋಣ.

೨೦೦೭ರ ಮೇ ೮ರಂದು ಪಿ.ಟಿ.ಐ. ವರದಿ ಮಾಡಿರುವಂತೆ, ಉತ್ತರ ನೆವಾಡದಲ್ಲಿನ ಹಿಂದೂ ದೇವಸ್ಥಾನದ, ಅಂತ ರ್ಧಾರ್ಮಿಕ ಸಂಬಂಧಗಳ ನಿರ್ದೇಶಕರಾದ ಶ್ರೀ ರಾಜನ್ ಜೆಡ್ ಅವರು ಸೋಮವಾರದ ಅಧಿವೇಶನವನ್ನು ಹಿಂದೂ ಪ್ರಾರ್ಥನೆಗಳೊಂದಿಗೆ ಪ್ರಾರಂಭಿಸಿದರು. ಕಾವಿಬಟ್ಟೆಯನ್ನುಟ್ಟು, ಕೊರಳಲ್ಲಿ ರುದ್ರಾಕ್ಷಿಯನ್ನು ಧರಿಸಿ, ಹಣೆಯಲ್ಲಿ ತಿಲಕವನ್ನಿಟ್ಟುಕೊಂಡು ಜೆಡ್ ಒಂದು ಆರ್ಷೇಯ ಸಂಪ್ರದಾಯದ ಪ್ರತೀಕದಂತೆ ಕಾಣಿಸುತ್ತಿದ್ದರು. ಶ್ರದ್ಧೆಯಿಂದ ಋಗ್ವೇದದ ಮಂತ್ರಗಳನ್ನು ಸ್ಪಷ್ಟವಾಗಿ ಉಚ್ಚರಿಸಿದರು, "ನಾನು ನನ್ನ ಪ್ರಾರ್ಥನೆಯನ್ನು ಭಗವಂತನ ಸ್ತೋತ್ರದೊಂದಿಗೆ ಪ್ರಾರಂಭಿಸುವೆ—ಆ ಭಗವಂತನ ಸ್ವರೂಪ ಏನೇ ಆಗಿರಲಿ, ಮತ್ತು ಅವನ ಕುರಿತಾದ ನಮ್ಮ ಕಲ್ಪನೆ ಏನೇ ಆಗಿರಲಿ—ಇದು ಆ ದೇವರನ್ನು ಕುರಿತಾಗಿದೆ."

ಓಂ ಸಹ ನಾವವತು । ಸಹ ನೌ ಭುನಕ್ತು ।
ಸಹ ವೀರ್ಯಂ ಕರವಾವಹೈ ।
ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ॥
ಓಂ ಶಾಂತಿಃ ಶಾಂತಿಃ ಶಾಂತಿಃ ॥

"ಭಗವಂತನು ನಮ್ಮನ್ನು ರಕ್ಷಿಸಲಿ. ಆತನು ನಮ್ಮನ್ನು ಪೋಷಿಸಲಿ. ಆತನ ಕೃಪೆಯಿಂದ ನಮ್ಮ ಕೆಲಸವು ಸಮರ್ಥವಾಗಿ ನಡೆಯಲಿ. ನಮ್ಮ ಅಧ್ಯಯನವು ತೇಜಸ್ವಿಯಾಗಿರಲಿ. ನಮ್ಮಲ್ಲಿ ಶಾಂತಿಯೂ, ಸೌಹಾರ್ದವೂ ನೆಲಸಿರಲಿ." ಕ್ರಿಸ್ತಪೂರ್ವ ೪೦೦೦ರ ಸುಮಾರಿನಲ್ಲಿ ರಚಿತವಾದ ತೈತ್ತಿರೀಯ ಉಪನಿಷತ್ತಿನ ಈ ಪ್ರಸಿದ್ಧ ಶಾಂತಿಮಂತ್ರದ ಅರ್ಥವನ್ನು ವಿವರಿಸಿದ ಬಳಿಕ ಜೆಡ್ ಅವರು ಭಗವದ್ಗೀತೆಯಿಂದ ನಿಸ್ವಾರ್ಥ ಕರ್ಮ, ಸಹಾನುಭೂತಿ, ದಯೆ, ಕರ್ತವ್ಯಗಳು ಹಾಗೂ ಮತ್ತೊಬ್ಬರ ಶ್ರೇಯಸ್ಸಿನ ಕುರಿತಾದ ಶ್ಲೋಕಗಳನ್ನು ಪಠಿಸಿ, **ಸಮಾನೋ ಮಂತ್ರ ಸ್ಸಮಿತಿಸ್ಸಮಾನೀ** ಎಂಬ ಋಗ್ವೇದದ ಕಡೆಯ ಮಂತ್ರದೊಂದಿಗೆ ಮುಕ್ತಾಯ ಮಾಡಿದರು.

ಸಂಸ್ಥಾನದ ಅಧ್ಯಕ್ಷರಾದ ಲೆಫ್ಟಿನೆಂಟ್ ಗವರ್ನರ್ ಬ್ರಿಯಾನ್ ಕೆ. ಕ್ರೋಲಿಕಿಯವರು ರಾಜನ್ ಜೆಡ್‌ರನ್ನು ಸಭೆಗೆ ಪರಿಚಯಿಸಿದರು. ಜೆಡ್ ಪ್ರಾರ್ಥನೆಯನ್ನು ಪ್ರಾರಂಭಿಸಿದಾಗ ಎಲ್ಲ ಸದಸ್ಯರೂ ಎದ್ದು ನಿಂತು ಆಸಕ್ತಿಯಿಂದ ಆಲಿಸಿದರು. ಆ ಪ್ರದೇಶದ ಹಿಂದೂ ನಿವಾಸಿಗಳಲ್ಲದೆ, ಅನೇಕ ಕ್ರಿಶ್ಚಿಯನ್ ಪಂಥಗಳ ಪಾದ್ರಿಗಳು ಹಾಗೂ ಸತ್ಯಚೇತನ ಇಂಟರ್‌ನ್ಯಾಷನಲ್ ಮತ್ತು ವಿಶ್ವಶಾಂತಿಯ ಕಾರ್ಯಕರ್ತರೂ ಭಾಗವಹಿಸಿ, ತಮ್ಮ ಸಹಮತವನ್ನು ಸೂಚಿಸಿದರು.

### ದ್ವಾರಕೆಯ ಪಳೆಯುಳಿಕೆ

ಗುಜರಾತಿನ ಜಾಮ್‌ನಗರ್ ಬಳಿಯ ಸಮುದ್ರ ತೀರದಡಿಯಲ್ಲಿ ಪ್ರಾಚ್ಯವಸ್ತು ಸಂಶೋಧಕರು ವೃತ್ತಾಕಾರದ ಒಂದು ಮರದ ಕಟ್ಟಡವನ್ನು ಕಂಡುಹಿಡಿದಿದ್ದಾರೆ. ಈ ಸುದ್ದಿಯು ೨೦೦೭ರ ಮೇ ೬ನೇ ತಾರೀಖಿನ ಅನೇಕ ಪತ್ರಿಕೆಗಳಲ್ಲಿ ವರದಿಯಾಗಿದೆ. ಕಳೆದುಹೋದ ಪ್ರಾಚೀನ ದ್ವಾರಕೆಯ ಅವಶೇಷವೆಂದು ಇದನ್ನು ಗುರುತಿಸಲಾಗಿದೆ. ಚೆನ್ನಾಗಿ ಸಂರಕ್ಷಿಸಲ್ಪಟ್ಟಿರುವ ಈ ಮರದ ಕಟ್ಟಡದ ಸುತ್ತ ಒಂದು ಕಲ್ಲಿನ ಕಟ್ಟಡವೂ ಕಂಡುಬಂದಿದೆ. ಈ ಪ್ರದೇಶದಲ್ಲಿ ಪುರಾತತ್ವ ಇಲಾಖೆಯು ೨೦೦೭ರ ಜನವರಿ ೧೮ರಂದು ಸಂಶೋಧನೆಯನ್ನು ಪ್ರಾರಂಭಿಸಿತ್ತು.

"ಈ ಸಂಶೋಧನೆ ಬಹಳ ಮಹತ್ವದ್ದು; ಏಕೆಂದರೆ, ಮರವನ್ನು ಕ್ಷ-ಕಿರಣ ಪರೀಕ್ಷೆಗೆ ಒಳಪಡಿಸಿ, ಅದರ ವಯಸ್ಸನ್ನು ನಿಶ್ಚಿತವಾಗಿ ತೀರ್ಮಾನಿಸಬಹುದು. ಇಂಗಾಲದ ಅಂಶವು ಎಲ್ಲ ಜೈವಿಕ ವಸ್ತುಗಳಲ್ಲೂ ಇರುತ್ತದೆ. ಇದನ್ನು ಸಂಶೋಧಿಸಿದಾಗ ಮರದ ಪ್ರಾಚೀನತೆಯನ್ನು ತಿಳಿಯಬಹುದು. ಹಿಂದೆ ಈ ಸ್ಥಳದಲ್ಲಿ ದೊರೆತಿದ್ದ ಕಲ್ಲು, ಗಾಜು, ಮಣಿ, ಮಡಕೆಯ ಚೂರುಗಳು ಮುಂತಾದ ಪಳೆಯುಳಿಕೆಗಳಿಂದ ಇದನ್ನು ತೀರ್ಮಾನಿಸಲು ಸಾಧ್ಯವಿರಲಿಲ್ಲ" ಎನ್ನುತ್ತಾರೆ ಭಾರತೀಯ ಪುರಾತತ್ವ ಸಂಶೋಧನೆಯ ಅಂತರ್ಜಲ ಶೋಧನಾ ವಿಭಾಗದ ಪ್ರಧಾನ ಸೂಪರಿಂಟೆಂಡೆಂಟರಾದ ಶ್ರೀ ಅಲೋಕ್ ತ್ರಿಪಾಠಿ.

ಜಾಮ್‌ನಗರದಲ್ಲಿರುವ ಸಮುದ್ರನಾರಾಯಣ ದೇವಸ್ಥಾನದ ನೈಋತ್ಯದ ದಿಕ್ಕಿನಲ್ಲಿ ಈ ಕಟ್ಟಡ ಕಂಡುಬಂದಿದೆ. ನೀರಿನಡಿಯಲ್ಲಿ ಇಳಿದು ಸಂಶೋಧಕರು ಕಟ್ಟಡದ ವಿನ್ಯಾಸ ಹಾಗೂ ಆಗಿನ ಕಾಲದ ತಂತ್ರಜ್ಞಾನವನ್ನು ಕೂಲಂಕಷವಾಗಿ ಪರೀಕ್ಷಿಸಿದ್ದಾರೆ. ಕೇವಲ ಮರದ ತೊಲೆಗಳಿಂದ ಹಾಗೂ ಮೊಳೆಗಳ ಸಹಾಯದಿಂದ ಸಾವಿರಾರು ವರ್ಷಗಳ ಕಾಲ ಸಮುದ್ರದ ಅಲೆಗಳ ರಭಸವನ್ನು ಎದುರಿಸಿರುವ ಈ ಕಟ್ಟಡದ ಸಾಮರ್ಥ್ಯ ಅಚ್ಚರಿ ಮೂಡಿಸಿದೆ. ಬಹುಶಃ ಒಂದು ಬೃಹತ್ತಾದ ನಗರವೇ ಈ ಪ್ರದೇಶದಲ್ಲಿ ಇದ್ದಿರಬೇಕು ಎಂದೇ ತೋರಿ ಬರುತ್ತಿದೆ. ಪುರಾಣಗಳಲ್ಲಿ ದ್ವಾರಕೆಯನ್ನು ಅತ್ಯಂತ ಸುಂದರವೂ, ಸಮೃದ್ಧವೂ ಆದ ಪಟ್ಟಣವೆಂದು ವಿವರಿಸಲಾಗಿದೆ.